# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 757(767) |
| ಸದಸ್ಯರ ಹೆಸರು | : | ಡಾ|| ತಳವಾರ್ ಸಾಬ್ಬಣ್ಣ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 16.12.2024 |
| ಉತ್ತರಿಸುವ ಸಚಿವರು | : | ಉನ್ನತ ಶಿಕ್ಷಣ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ KEA ಮುಖಾಂತರ ಪ್ರವೇಶ ಪ್ರಕ್ರಿಯೆ ಸಂದರ್ಭದಲ್ಲಿ ಸೀಟ್ ಬ್ಲಾಕಿಂಗ್ ಧಂದೆ ನಡೆಸುವ ವ್ಯವಸ್ಥಿತ ಜಾಲದ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಬಂದಿರುತ್ತದೆ.</td></tr>
<tr><td>ಆ)</td><td>ಇಂಜಿನಿಯರಿಂಗ್ / ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶಕ್ಕೆ ಸೀಟ್ ಬ್ಲಾಕಿಂಗ್ ವ್ಯವಸ್ಥಿತವಾಗಿ ಹಲವಾರು ವರ್ಷಗಳಿಂದ ನಡೆಯುತ್ತಿದ್ದರು ಸರ್ಕಾರ ಏಕೆ ಕಠಿಣ ಕ್ರಮ ಜರುಗಿಸಿರುವುದಿಲ್ಲ;</td><td rowspan="3">2024ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಸರ್ಕಾರಿ ಕೋಟಾದ ಇಂಜಿನಿಯರಿಂಗ್ ಸೀಟು ಹಂಚಿಕೆಯಾಗಿದ್ದ ವಿದ್ಯಾರ್ಥಿಗಳು ತದನಂತರದಲ್ಲಿ ಕಾಲೇಜಿಗೆ ಪ್ರವೇಶ ಪಡೆಯದೆ ಇರುವ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಈ ಕುರಿತಾಗಿ ಕೆಲವು ವಿದ್ಯಾರ್ಥಿಗಳು ತಾವು ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿಲ್ಲವೆಂದು ಹಾಗೂ ಆಪ್ಷನ್ ಎಂಟ್ರಿ ಮಾಡಿಲ್ಲವೆಂದು ಪ್ರಾಧಿಕಾರಕ್ಕೆ ಉತ್ತರ ಕೊಟ್ಟಿರುತ್ತಾರೆ. ಹೀಗಾಗಿ, ಸೀಟ್ ಬ್ಲಾಕಿಂಗ್ ಆಗಿರುವ ಬಗ್ಗೆ ಅನುಮಾನ ಬಂದು ತನಿಖೆ ನಡೆಸಲು ಮಲ್ಲೇಶ್ವರಂ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಲಾಗಿದೆ(ಪ್ರಥಮ ವರ್ತಮಾನದ ವರದಿ ಸಂಖ್ಯೆ:171/2024).<br><br>ಪ್ರಸ್ತುತ ಪ್ರಕರಣವು ಪೊಲೀಸ್ ತನಿಖೆಯಲ್ಲಿದ್ದು, ಅಂತಿಮ ವರದಿಯನ್ನು ಆಧರಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಇ)</td><td>ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ತೊಡಗಿರುವ ಅಧಿಕಾರಿಗಳು / ರಾಜಕಾರಣಿಗಳು ಹಣ ಮಾಡುತ್ತಿರುವುದು ಮತ್ತು ಅರ್ಹತೆ ಹೊಂದಿದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿರುವುದರ ಬಗ್ಗೆ ಸರ್ಕಾರ ಕ್ರಮ ವಹಿಸದೆ ಇರಲು ಕಾರಣವೇನು;</td></tr>
<tr><td>ಈ)</td><td>ಹೆಚ್ಚಿನ ಬೇಡಿಕೆ ಇರುವ ಕೋರ್ಸುಗಳಿಗೆ ಆಯ್ಕೆಯಾಗಿ ಪ್ರವೇಶ ಪಡೆಯದ ವಿದ್ಯಾರ್ಥಿಗಳನ್ನು ಒಳಗೊಂಡು ಈ ದಂಧೆಯಲ್ಲಿ ತೊಡಗಿರುವ ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು;</td></tr>
<tr><td>ಉ)</td><td>ಉನ್ನತ ಶಿಕ್ಷಣ ಇಲಾಖೆಯ/ KEA ಅಧಿಕಾರಿಗಳು ನೇರವಾಗಿ ಸೀಟ್ ಬ್ಲಾಕಿಂಗ್ ದಂಧೆಯಲ್ಲಿ ಭಾಗಿಯಾಗಿದ್ದಾರೆ ಎಂದು ಮಾಧ್ಯಮದಲ್ಲಿ ವರದಿಯಾಗುತ್ತಿದ್ದು, ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರವು ಕ್ರಮ ಕೈಗೊಳ್ಳದಿರಲು ಕಾರಣವೇನು ?</td><td>ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಹೊರಗುತ್ತಿಗೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಶ್ರೀ ಅವಿನಾಶ್ ಈ ಪ್ರಕರಣದಲ್ಲಿ ಭಾಗಿಯಾಗಿರುತ್ತಾರೆ ಎಂದು ಕಂಡುಬಂದ ಕಾರಣ ಪೊಲೀಸರು ಸದರಿಯವರನ್ನು ಬಂಧಿಸಿರುತ್ತಾರೆ. ಅಲ್ಲದೇ, ದಿನಾಂಕ 04.12.2024 ರಂದು ಸದರಿಯವರನ್ನು ಕೆಲಸದಿಂದ ತೆಗೆಯಲಾಗಿರುತ್ತದೆ.</td></tr>
</table>

**ಸಂಖ್ಯೆ: ಇಡಿ 494 ಟಿಇಸಿ 2024**

(ಡಾ|| ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು